# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1)ಪಿಆರ್/81/04–05/21–22

ಮುಖ್ಯ ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ: 21/6/2021

## ಕಛೇರಿ ಆದೇಶ

ವಿಷಯ: ದಿನಾಂಕ: 01–01–2021ಕ್ಕೆ ಇರುವಂತೆ ಪ್ರಚುರಪಡಿಸಲಾಗಿರುವ ಸಹಾಯಕ ಕಾನೂನು ಅಧಿಕಾರಿಗಳ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮಸಂಖ್ಯೆಯ ಆದೇಶ ದಿನಾಂಕ: 05–04–2021

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 01–01–2021ಕ್ಕೆ ಇರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾನೂನು ಅಧಿಕಾರಿಗಳ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಉಲ್ಲೇಖಿತದ ಕಛೇರಿ ಆದೇಶದಂತೆ ತಯಾರಿಸಿ ಪ್ರಚುರಪಡಿಸಲಾಗಿರುತ್ತದೆ.

ಸದರಿ ಸಹಾಯಕ ಕಾನೂನು ಅಧಿಕಾರಿಗಳ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಚುರಪಡಿಸಿದ 15 ದಿವಸಗಳೊಳಗಾಗಿ ಲಿಖಿತದ ಮುಖೇನ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದ್ದು, ಸದರಿ ಅಧಿಕಾರಿಗಳು ಸದರಿ ಸೇವಾ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯನ್ನು ಪರಿಶೀಲಿಸಿ, ಸಹಾಯಕ ಕಾನೂನು ಅಧಿಕಾರಿಗಳ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಚುರಪಡಿಸಲಾಗಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ) ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಕಾನೂನು ಕೋಶದ ಮುಖ್ಯಸ್ಥರು ರವರಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಕಛೇರಿ ಪ್ರತಿ.

[redacted]

## ದಿನಾಂಕ: 01–01–2021ಕ್ಕೆ ಇರುವಂತೆ ಪ್ರಚುರಪಡಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಾನೂನು ಅಧಿಕಾರಿಗಳ ಅಂತಿಮ ಸೇವಾ ಜೇಷ್ಠತಾ ಪಟ್ಟಿ (ಅನುಬಂಧ–1)

| ಕ್ರ ಸಂ | ಅಧಿಕಾರಿಯ ಹೆಸರು | ಪ್ರವರ್ಗ | ಹುದ್ದೆಯ ಪದನಾಮ | ಮೂಲ ಹುದ್ದೆ | ಜನ್ಮ ದಿನಾಂಕ | ಪಾಲಿಕೆ ಸೇವೆಗೆ ಸೇರಿದ ದಿನಾಂಕ | ಹಾಲಿ ಹುದ್ದೆ ಧಾರಣೆ ಮಾಡಿದ ದಿನಾಂಕ | ಜೇಷ್ಠತೆಗೆ ನಿಗದಿಪಡಿಸಿರುವ ದಿನಾಂಕ | ವಿದ್ಯಾರ್ಹತೆ | ಇಲಾಖಾ ಪರೀಕ್ಷೆ ತೇರ್ಗಡೆ | ಷರಾ |
|---|---|---|---|---|---|---|---|---|---|---|---|
| 1. | ಜೆ. ನಾಗರಾಜು | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 10–06–1946 | 14–05–1991 | 19–12–1997 | 19–12–1997 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ನಿವೃತ್ತಿ |
| 2. | ಎ.ಬಿ. ನರಸಿಂಹಯ್ಯ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 01–01–1948 | 14–05–1991 | 21–01–1999 | 21–01–1999 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ನಿವೃತ್ತಿ |
| 3. | ಬಿ. ಶಿವಲಿಂಗಯ್ಯ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 22–10–1951 | 14–05–1991 | 21–01–1999 | 21–01–1999 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ನಿವೃತ್ತಿ |
| 4. | ಎಸ್. ಶ್ರೀಧರಮೂರ್ತಿ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 14–05–1952 | 14–05–1991 | 07–12–2005 | 07–12–2005 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ನಿವೃತ್ತಿ |
| 5. | ಐ.ಜೆ. ಸುಧಾಕರ್ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 07–06–1951 | 14–05–1991 | 07–12–2005 | 07–12–2005 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ನಿವೃತ್ತಿ |
| 6. | ಬಿ.ಕೆ. ರಾಮೇಗೌಡ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 20–05–1955 | 14–05–1991 | 26–06–2006 | 26–06–2006 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ನಿವೃತ್ತಿ |
| 7. | ಎ.ಪಿಚ್ಚ ಮುತ್ತು | ಪ.ಜಾತಿ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 07–08–1952 | 14–05–1991 | 19–12–1997 | 19–12–1997 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ನಿವೃತ್ತಿ |
| 8. | ಎಂ. ಮುನಿರಾಜು | ಪ.ಜಾತಿ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 16–06–1973 | 28–01–2004 | 01–10–2011 | 01–10–2011 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| 9. | ಮನೋಹರ್ ಎಸ್. ಹಾಲಿಗೇರಿ | ಪ.ಪಂಗಡ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 01–02–1973 | 28–01–2004 | 29–02–2012 | 29–02–2012 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| 10. | ಎನ್.ಎ. ಜಯಚಂದ್ರ ರೆಡ್ಡಿ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 23–04–1976 | 19–11–2009 | 10–04–2015 | 10–04–2015 | ಬಿ.ಎ. ಎಲ್.ಎಲ್.ಬಿ. ಎಲ್.ಎಲ್.ಎಂ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| 11. | ಚೈತ್ರಾ ಹೊನ್ನಾಪುರ | ಪ.ಜಾತಿ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 24–05–1983 | 19–11–2009 | 27–06–2015 | 27–06–2015 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| 12. | ಹನುಮಂತ ಎಫ್ ತಲವಾರ | ಪ.ಪಂಗಡ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 18–06–1976 | 19–11–2009 | 27–06–2015 | 27–06–2015 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |

| | | | | | | | | | | | |
|---|---|---|---|---|---|---|---|---|---|---|---|
| 13. | ಬಸವರಾಜ ವೈ. ಅಂಬಿಗೇರ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 20–06–1979 | 23–11–2009 | 01–01–2020 | 01–01–2020 | ಬಿ.ಕಾಂ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| **IA**. ರಾಜ್ಯಮಟ್ಟದ ಸ್ಥಳೀಯ ವೃಂದ (ಹೈದ್ರಾಬಾದ್–ಕರ್ನಾಟಕ) ಯಾರು ಇರುವುದಿಲ್ಲ. | | | | | | | | | | | |
| **IB**. ಉಳಿಕೆ ವೃಂದ – ಮೂಲ ವೃಂದದಲ್ಲಿ ಇದ್ದಂತೆ | | | | | | | | | | | |

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[redacted]

## ದಿನಾಂಕ: 01-01-2021ಕ್ಕೆ ಇರುವಂತೆ ಪ್ರಚುರಪಡಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾನೂನು ಅಧಿಕಾರಿಗಳ ಅಂತಿಮ ಸೇವಾ ಜೇಷ್ಠತಾ ಪಟ್ಟಿ (ಅನುಬಂಧ-2)

| ಕ್ರ ಸಂ | ಅಧಿಕಾರಿಯ ಹೆಸರು | ಪ್ರವರ್ಗ | ಹುದ್ದೆಯ ಪದನಾಮ | ಮೂಲ ಹುದ್ದೆ | ಜನ್ಮ ದಿನಾಂಕ | ಪಾಲಿಕೆ ಸೇವೆಗೆ ಸೇರಿದ ದಿನಾಂಕ | ಹಾಲಿ ಹುದ್ದೆ ಧಾರಣೆ ಮಾಡಿದ ದಿನಾಂಕ | ಜೇಷ್ಠತೆಗೆ ನಿಗದಿಪಡಿಸಿರುವ ದಿನಾಂಕ | ವಿದ್ಯಾರ್ಹತೆ | ಇಲಾಖಾ ಪರೀಕ್ಷೆ ತೇರ್ಗಡೆ | ಷರಾ |
|---|---|---|---|---|---|---|---|---|---|---|---|
| 1. | ಎನ್.ಎ. ಜಯಚಂದ್ರ ರೆಡ್ಡಿ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 23-04-1976 | 19-11-2009 | 10-04-2015 | 10-04-2015 | ಬಿ.ಎ. ಎಲ್.ಎಲ್.ಬಿ. ಎಲ್.ಎಲ್.ಎಂ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| 2. | ಚೈತ್ರಾ ಹೊನ್ನಾಪುರ | ಪ.ಜಾತಿ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 24-05-1983 | 19-11-2009 | 27-06-2015 | 27-06-2015 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| 3. | ಹನುಮಂತ ಎಫ್ ತಲವಾರ | ಪ.ಪಂಗಡ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 18-06-1976 | 19-11-2009 | 27-06-2015 | 27-06-2015 | ಬಿ.ಎ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |
| 4. | ಬಸವರಾಜ ವೈ. ಅಂಬಿಗೇರ | ಸಾಮಾನ್ಯ | ಸಹಾಯಕ ಕಾನೂನು ಅಧಿಕಾರಿ | ಕಿರಿಯ ಕಾನೂನು ಅಧಿಕಾರಿ | 20-06-1979 | 23-11-2009 | 01-01-2020 | 01-01-2020 | ಬಿ.ಕಾಂ. ಎಲ್.ಎಲ್.ಬಿ. | ನಿಗಧಿತ ಎಲ್ಲಾ ಇಲಾಖಾ ಪರೀಕ್ಷೆಗಳು | ಮುಂಬಡ್ತಿ |

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಾಲಿಕೆಯಲ್ಲಿ ದಿನಾಂಕ: 01-01-2021ಕ್ಕೆ ಇರುವಂತೆ ಪ್ರಚುರಪಡಿಸಿರುವ ಸಹಾಯಕ ಕಾನೂನು ಅಧಿಕಾರಿ ವೃಂದದ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಗೆ ಬಂದಿರುವ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ವಹಿಸಲಾಗಿರುವ ಕ್ರಮದ ವಿವರಗಳು.

| ಕ್ರ.ಸಂ | ಆಕ್ಷೇಪಣೆದಾರರ ಹೆಸರು, ಪದನಾಮ ಮತ್ತು ಕಛೇರಿ ಶ್ರೀಯುತರುಗಳಾದ | ಆಕ್ಷೇಪಣೆಯ ಸಂಕ್ಷಿಪ್ತ ವಿವರಗಳು | ಆಕ್ಷೇಪಣೆಯ ಬಗ್ಗೆ ಕೈಗೊಂಡ ನಿರ್ಣಯ / ತೀರ್ಮಾನ |
|---|---|---|---|
| 1. | ಬಸವರಾಜು ವೈ ಅಂಬಿಗೇರ ಸಹಾಯಕ ಕಾನೂನು ಅಧಿಕಾರಿ | ಬೃಹತ್ ಬೆಂಗಳೂರ ಮಹಾನಗರ ಪಾಲಿಕೆಯ ಕಾನೂನು ವಿಭಾಗದಲ್ಲಿ 2009ನೇ ಸಾಲಿನಿಂದ ಕಿರಿಯ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸಿ, ದಿನಾಂಕ 01-01-2020 ರಂದು ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ಮುಂಬಡ್ತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದು, ಈ ಕೆಳಕಂಡಂತೆ ಆಕ್ಷೇಪಣೆ ಸಲ್ಲಿಸಿರುತ್ತೇನೆ.<br><br>1. ಈ ಹಿಂದೆ ನಾನು ದಿನಾಂಕ 02-02-2015 ಮತ್ತು ದಿನಾಂಕ 04-06-2015 ರಂದು ಮನವಿಗಳನ್ನು ಸಲ್ಲಿಸಿ ಕಿರಿಯ ಕಾನೂನು ಅಧಿಕಾರಿ ಹುದ್ದೆಯಿಂದ ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಬೇಕೆಂದು ಸಲ್ಲಿಸಿರುತ್ತೇನೆ. ಆದರೆ ಕಿರಿಯ ಕಾನೂನು ಅಧಿಕಾರಿ ವೃಂದದ ಸೇವಾ ಜೇಷ್ಠತೆಯಲ್ಲಿ ನನಗಿಂತ ಕಿರಿಯ ಅಧಿಕಾರಿಗಳಾದ ಶ್ರೀಮತಿ ಚೈತ್ರಾ ಹೊನಾಪುರ ಮತ್ತು ಹನುಮಂತ್ ಎಫ್ ತಳವಾರ್ ರವರಿಗೆ ದಿನಾಂಕ 27-06-2015 ರಂದು ಬ್ಯಾಕ್‌ಲಾಗ್ ಅಡಿ ಮುಂಬಡ್ತಿಯನ್ನು ನೀಡಲಾಗಿರುತ್ತದೆ. ಸದರಿ ಮುಂಬಡ್ತಿಯನ್ನು ಪ್ರಶ್ನಿಸಿ ನಾನು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಂಖ್ಯೆ:29711/2015 ಪ್ರಕರಣವನ್ನು ದಾಖಲಿಸಿದ್ದು ವಿಚಾರಣಾ ಹಂತದಲ್ಲಿರುತ್ತದೆ. ಸದರಿ ಪ್ರಕರಣದಲ್ಲಿ ಪಾಲಿಕೆ ಪರವಾಗಲಿ ಯಾವುದೇ ಮಧ್ಯಂತರ ತಡೆಯಾಜ್ಞೆಗಳು ಇರುವುದಿಲ್ಲ.<br>2. ರಾಜ್ಯ ಸಿವಿಲ್ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರಿಗೆ ಬ್ಯಾಕ್‌ಲಾಗ್ ಹುದ್ದೆಗಳಿಗೆ ಎದುರಾಗಿ ಬಡ್ತಿ ನೀಡುವಾಗ ಅನುಸರಿಸಲಾಗುತ್ತಿರುವ ರೋಷ್ಟರ್ ಬಿಂದುಗಳ ಬಗ್ಗೆ **ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 23(i) ಸೇನೆನಿ 2015ರ, ಬೆಂಗಳೂರು, ದಿನಾಂಕ:04-03-2015** ರಲ್ಲಿ ದಿನಾಂಕ:24-06-1997ರ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 10 ಸೆಹಿಮ 97ರಲ್ಲಿ ಎಸ್.ಸಿ/ಎಸ್.ಟಿ ನೌಕರರಿಗೆ ನಿಗಧಿಪಡಿಸಲಾಗಿರುವ ಹೆಚ್ಚುವರಿ ರೋಷ್ಟರ್ ಬಿಂದುಗಳನ್ನು ರದ್ದುಪಡಿಸಲಾಗಿರುತ್ತದೆ. | ಶ್ರೀ ಬಸವರಾಜು ವೈ.ಅಂಬಿಗೇರ, ಸಹಾಯಕ ಕಾನೂನು ಅಧಿಕಾರಿ ಇವರು ದಿನಾಂಕ: 01-01-2021ರ ಕರಡು ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಿದ್ದು, ಈಗಾಗಲೇ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಂಖ್ಯೆ:29711/2015 ನ್ನು ಸಲ್ಲಿಸಿದ್ದು, ಸದರಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ಆದೇಶದಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.<br><br>ಮುಂದುವರೆದು, ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ಸಂಖ್ಯೆ: ಬಿ12(3ಎ)ಪಿಆರ್/21/19-20, ದಿನಾಂಕ:01-01-2020 ರಂದು ಮುಂಬಡ್ತಿ ಹೊಂದಿದ್ದು, ಅದರಂತೆ ಸೇವಾ ಜೇಷ್ಠತಾ ಪಟ್ಟಿಯಲ್ಲಿ ನಿಗಧಿಪಡಿಸಿರುವುದು ಸಮಂಜಸವಾಗಿರುವುದರಿಂದ ನಿಮ್ಮ ಅರ್ಜಿಯನ್ನು ವಿಲೇವಾರಿ ಮಾಡಲಾಗಿದೆ. |

| | | | |
|---|---|---|---|
| | | ಎಸ್.ಸಿ/ಎಸ್.ಟಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ಒದಗಿಸಲು 33 ರೋಷ್ಟರ್ ಬಿಂದುಗಳ ವರ್ತುಲದಲ್ಲಿ 1, 7, 14, 21, 27ನೇ ಬಿಂದುಗಳ ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ, ಅರ್ಹ ನೌಕರರ ಲಭ್ಯತೆಯನ್ನು ಅನುಸರಿಸಿ ಬಡ್ತಿ ನೀಡಲು ಮಾರ್ಪಡಿಸಲಾಗಿರುತ್ತದೆ. ಈಗಾಗಲೇ ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ಎಸ್.ಸಿ ಅಭ್ಯರ್ಥಿಯಾದ ಶ್ರೀ.ಮುನಿರಾಜು ರವರಿಗೆ ಮತ್ತು ಪ.ಪಂಗಡದ ಅಭ್ಯರ್ಥಿಯಾದ ಶ್ರೀ.ಮನೋಹರ್ ಎಸ್.ಹಾಲಿಗೇರಿ ಬಡ್ತಿ ನೀಡಿರುವುದನ್ನು ರೋಷ್ಟರ್ ಬಿಂದು 2 ಬ್ಯಾಕ್‌ಲಾಗ್ ಮತ್ತು ಬಿಂದು 7ರಲ್ಲಿ ಮೀಸಲಾತಿಯ ಅಭ್ಯರ್ಥಿಗೆ ಬಡ್ತಿ ನೀಡಿದಂತೆ ಅರ್ಥೈಸಿಕೊಳ್ಳಬೇಕಾಗುತ್ತದೆ. ಸದರಿ ವಿಷಯದಲ್ಲಿ ಶ್ರೀ.ಎಂ.ನಾಗರಾಜ್ ಪ್ರಕರಣ ಮತ್ತು ಬಿ.ಕೆ.ಪವಿತ್ರ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುತ್ತದೆ.<br>3. ಕರ್ನಾಟಕ ರಾಜ್ಯದಲ್ಲಿ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಮುಂಬಡ್ತಿಗೆ ಪರಿಗಣಿಸುವಾಗ ಇತರೆ ಅಭ್ಯರ್ಥಿ ಎಂದು ಪರಿಗಣಿಸದೇ ಮೀಸಲಾದ ರೋಷ್ಟರ್ ಬಿಂದುಗಳಿಗೆ ಎದುರಾಗಿ ಪರಿಗಣಿಸಲಾಗುತ್ತದೆ. ರಾಜ್ಯ ಸಿವಿಲ್ ಸೇವೆಗಳಲ್ಲಿ ರಿಕ್ತಸ್ಥಾನ ಆಧಾರಿತ ಮೀಸಲಾತಿ ಅನುಸರಿಸುತ್ತಿರುವುದರಿಂದ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳು ಸೇವಾ ಹಿರಿತನ ಮತ್ತು ಸ್ವಂತ ಅರ್ಹತೆ ಮೇಲೆ ಮುಂಬಡ್ತಿ ಪಡೆದಲ್ಲಿ ಅದನನ್ನೂ ಸಹಿತ ಮೀಸಲಾದ ಬಿಂದುಗಳಿಗೆ ಎದುರಾಗಿ ನೀಡಿದ ಮುಂಬಡ್ತಿಯನ್ನು ಪರಿಗಣಿಸಬೇಕಾಗಿರುತ್ತದೆ.<br>4. ಬಿ ಕೆ ಪವಿತ್ರ-2 ಪ್ರಕರಣದಲ್ಲಿ ನೀಡಿರುವ ತೀರ್ಪಿನನ್ವಯ ಹಾಗೂ ಕರ್ನಾಟಕ(ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ನಿಯಮ 5ರಲ್ಲಿ ವಿವರಿಸಿರುವಂತೆ ಅರ್ಹತಾ ದಿನಾಂಕಗಳನ್ನು ನಿಗದಿಪಡಿಸಬೇಕಾಗಿರುತ್ತದೆ.<br>5. ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ನಿಯಮ 5ರಲ್ಲಿ ವಿವರಿಸಿರುವಂತೆ ಮೀಸಲಾತಿ ಆದೇಶಗಳನ್ನು ಕಲ್ಪಿಸಿರುವ ಮೀಸಲಾತಿಗೆ ಪ್ರತಿಯಾಗಿ ಕಿರಿಯ ಕಾನೂನು ಅಧಿಕಾರಿ ವೃಂದದಿಂದ ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ | |

| | | | |
|---|---|---|---|
| | | ಮುಂಬಡ್ತಿಯನ್ನು ನೀಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಸಹಾಯಕ ಕಾನೂನು ಅಧಿಕಾರಿ ಜೇಷ್ಠತಾ ಪಟ್ಟಿಯನ್ನು ಪುನರಾವಲೋಕನೆ ಮಾಡಬೇಕಾಗಿರುತ್ತದೆ. ಏಕೆಂದರೆ ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ಮುಂಬಡ್ತಿ ನೀಡುವಾಗ, ಬ್ಯಾಕ್‌ಲಾಗ್ ಇದ್ದರೂ ಸಾಮನ್ಯ ಅಭ್ಯರ್ಥಿ/ಸೇವಾ ಹಿರಿತನದ ಮೇಲೆ ಮುಂಬಡ್ತಿ ಎನ್ನುವುದು ಸಮಂಜಸವಲ್ಲ. ಅರ್ಹ SC & ST ಅಭ್ಯರ್ಥಿ ಲಭ್ಯವಿದಲ್ಲಿ, ಬ್ಯಾಕ್‌ಲಾಗ್ ಇದ್ದಲ್ಲಿ ಮೊದಲು ಭರ್ತಿ ಮಾಡಬೇಕಾಗಿರುತ್ತದೆ. ಆದರೆ ಸೇವಾಹಿರಿಯನಾದ ಮೇಲೆ ಮುಂಬಡ್ತಿಯ ನೀಡಲಾಗಿದೆಂದು ಭಾವಿಸಿ, ಪುನಃ SC & ST ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡಿರುವುದು ಸಮಂಜಸವಲ್ಲ. ಇದು ಕಾನೂನಿನ ಈ ಹಿನ್ನಲೆಯಲ್ಲಿ ಮೇರಿಟ್/ಸೇವಾಹಿರಿತನದ ಆಧಾರದ ಮೇಲೆ ಮಂಬಡ್ತಿ ಹೊಂದಿದ ಪ.ಜಾ/ಪ.ಪಂ ಅಭ್ಯರ್ಥಿಗಳನ್ನು ಮುಂಬಡ್ತಿ ಪರಿಗಣಿಸುವಾಗಿ ಇತರೇ ಅಭ್ಯರ್ಥಿಯೆಂದು ಪರಿಗಣಿಸದೇ ಮೀಸಲಾದ ರೋಸ್ಟರ್ ಬಿಂದುಗಳಿಗೆ ಎದುರಾಗಿ ಪರಿಗಣಿಸಲಾಗುತ್ತದೆ.<br>6. ಈಗಾಗಲೇ ದಿನಾಂಕ 20-01-2020 ರಂದು ಮಾನ್ಯ ಉಪ ಆಯುಕ್ತರು (ಆಡಳಿತ) ರವರಿಗೆ ಮನವಿ ಸಲ್ಲಿಸಿ ದಿನಾಂಕ 01-01-2020 ರಂದು ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ನೀಡಿರುವ ಮುಂಬಡ್ತಿಯನ್ನು ಬಿ ಕೆ ಪವಿತ್ರ ಪ್ರಕರಣದ ತೀರ್ಪಿನನ್ವಯ ಹಾಗೂ ಘನ ಸರ್ಕಾರದ ಆದೇಶದನ್ವಯ ನನಗಿಂತ ಸೇವಾ ಜೇಷ್ಠತೆಯಲ್ಲಿ ಕಿರಿಯರಿಗೆ ನೀಡಲಾದ ಬಡ್ತಿ ದಿನಾಂಕ:27-06-2015ರಂತೆ ಪೂರ್ವಾನ್ವಯವಾಗಿ ನನ್ನ ಮುಂಬಡ್ತಿಯನ್ನು ಪರಿಗಣಿಸಿ, ಸೇವಾ ಹಿರಿತನವನ್ನು ನಿಗದಿಪಡಿಸಲು ಕೋರಲಾಗಿರುತ್ತದೆ. ಸದರಿ ಅರ್ಜಿ ಇತ್ಯರ್ಥವಾಗದೆ ಆಡಳಿತ ಶಾಖೆಯಲ್ಲಿ ಬಾಕಿ ಇರುತ್ತದೆ. ದಿನಾಂಕ 20-01-2020 ರಂದು ಸಲ್ಲಿಸಿರುವ ಮನವಿಯನ್ನು ಈ ಅರ್ಜಿಯ ಒಂದು ಭಾಗ ಎಂದು ಪರಿಗಣಿಸಲು ಕೋರಿದೆ.<br>7. ಈಗಾಗಲೇ ಬಿ ಕೆ ಪವಿತ್ರ ಪ್ರಕರಣದ ತೀರ್ಪಿನನ್ವಯ ಹಾಗೂ ಘನ ಸರ್ಕಾರದ ಆದೇಶದನ್ವಯ ಸಹಾಯಕ ಕಾನೂನು ಅಧಿಕಾರಿಗಳ ಸೇವಾಜೇಷ್ಟತೆಯನ್ನು ಪುನರ್ವಲೋಕನ ಮಾಡಿ ಪ್ರಚುರಪಡಿಸಲಾಗಿರುತ್ತದೆ. ಅಂದರೆ ಸಹಾಯಕ ಕಾನೂನು ಅಧಿಕಾರಿಗಳ ಹುದ್ದೆಗೆ ಬಿಂದು ಒಂದರಲ್ಲಿ ಮೀಸಲಾತಿ ಅಡಿ | |

| | | | |
|---|---|---|---|
| | | ಮುಂಬಡ್ತಿ ಹೊಂದಿರುವ ಶ್ರೀ ಎ ಪಿಚ್ಚುಮುತ್ತು ಸೇವಾ ಜೇಷ್ಠತೆಯಲ್ಲಿ ಪುನರ್ವಲೋಕನ ಮಾಡಿ ಪ್ರಚುರಪಡಿಸಲಾಗಿರುತ್ತದೆ.<br>ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:01-01-2021ಕ್ಕೆ ಇರುವಂತೆ ಘೋಷಿಸಿರುವ ಸಹಾಯಕ ಕಾನೂನು ಅಧಿಕಾರಿಗಳ ಕರಡು ಸೇವಾ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುತ್ತಾ, ಮೂಲವೃಂದ ಕಿರಿಯ ಕಾನೂನು ಅಧಿಕಾರಿ ಸೇವಾ ಜೇಷ್ಠತೆಯಲ್ಲಿ ನನಗಿಂತ ಕಿರಿಯರಿಗೆ ನೀಡಲಾದ ಮುಂಬಡ್ತಿ ದಿನಾಂಕ:27-06-2015 ರಿಂದ ನನಗೆ ನೀಡಲಾದ ಮುಂಬಡ್ತಿಯನ್ನು ಬಿ ಕೆ ಪವಿತ್ರ ಪ್ರಕರಣದ ತೀರ್ಪಿನನ್ವಯ ಹಾಗೂ ಘನ ಸರ್ಕಾರದ ಆದೇಶದನ್ವಯ ಪೂರ್ವಾನ್ವಯವಾಗಿ ನಿಗದಿಪಡಿಸಿ, ಸಹಾಯಕ ಕಾನೂನು ಅಧಿಕಾರಿಗಳ ಸೇವಾಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ ಚೈತ್ರಾ ಹೊನಾಪುರ ಮತ್ತು ಶ್ರೀ ಹನುಮಂತ್ ಎಫ್ ತಳವಾರ್ ರವರಿಗಿಂತ ಜೇಷ್ಠನೆಂದು ಘೋಷಿಸಲು ಕೋರಿರುತ್ತಾರೆ. | |

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ